# <u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

## <u>ಸಿ.ಸಿ. 1915/2019</u>

<u>ಸಾಕ್ಷಿದಾರರ ಹೇಳಿಕೆಃ</u>

| | | | |
|---|---|---|---|
| **ಹೆಸರು** | : | ಮಲ್ಲಿಕಾರ್ಜುನಾ ಹೆಚ್ | ಚಾಸಾಃ **14** ಪ್ರಾಸಾಃ **4** |
| **ತಂದೆಯ ಹೆಸರು** | : | ಹನುಮಂತ ಎ ಕೆ | |
| **ವಯಸ್ಸು** | : | **38** ವರ್ಷ | |
| **ವೃತ್ತಿ** | : | ವ್ಯವಸಾಯ | |
| **ವಾಸಸ್ಥಳ** | : | ನರಸಗೊಂಡನಹಳ್ಳಿ | |

ದಿನಾಂಕಃ **25-07-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-</u>

ಆರೋಪಿ ಮತ್ತು ಚಾಸಾ-1 ಗೊತ್ತಿಲ್ಲ. ಚಾಸಾ-11 ಗೊತ್ತಿಲ್ಲ. ಮೃತ ನಾಗರಾಜ ಗೊತ್ತು. ಚಾಸಾ-11 ಮತ್ತು ಮೃತ ನಾಗರಾಜರವರಿಗೆ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂಬ ವಿಚಾರ ನನಗೆ ಗೊತ್ತಿಲ್ಲ. ಈಗೇ ಸುಮಾರು 6 ವರ್ಷಗಳ ಹಿಂದೆ ನನ್ನ ವೈಯಕ್ತಿಕ ಕೆಲಸದ ಮೇರೆಗೆ ಹೊನ್ನಾಳಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರ ಕೋರಿಕೆಯ ಮೇರೆಗೆ 1 ದಾಖಲೆಗಳಿಗೆ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ನಾನು ಈ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆ ಮತ್ತು ಮರುಹೇಳಿಕೆಯನ್ನು ಕೊಟ್ಟಿರುವುದಿಲ್ಲ.

ಪೊಲೀಸರಿಗೆ ಬರೆದುಕೊಟ್ಟ ಮುಚ್ಚಳಿಕೆಯನ್ನು ನಿಪಿ-25 ಎಂದು, ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು

ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲು:- ಮಾನ್ಯ ಸ.ಸ.ಅ. ರವರಿಂದ:-</u>

ದಿಃ 26-05-2019 ರಂದು ಸಂಜೆ 07-00 ಗಂಟೆ ಸಮಯದಲ್ಲಿ ನಾನು ನಮ್ಮ ಗ್ರಾಮದಲ್ಲಿ ಹೊನ್ನಾಳಿ ಹರಿಹರ ರಾಜ್ಯ ಹೆದ್ದಾರಿ ರಸ್ತೆಯ ಪಕ್ಕದಲ್ಲಿರುವ ರಾಮಪ್ಪ ಎ ಕೆ ಅಂಗಡಿಯ ಹತ್ತಿರ ನಾನು ಮತ್ತು ಚಾಸಾ-13 ರವರು ಮಾತನಾಡುತ್ತಾ ನಿಂತುಕೊಂಡಿದ್ದಾಗ ಹೊನ್ನಾಳಿ ಕಡೆಯಿಂದ ಅರಕೆರೆ ಎ ಕೆ ಕಾಲೋನಿ ವಾಸಿಯಾದ ನಾಗರಾಜ ಎಸ್ ಹೆಚ್ ಬಿನ್ ಹನುಮಂತಪ್ಪ ಇವರು ತಮ್ಮ ಸ್ಕೂಟಿಯನ್ನು ನಮ್ಮ ಗ್ರಾಮದ ಬಸ್ ನಿಲ್ದಾಣದ ಹತ್ತಿರ ರಸ್ತೆಯ ಎಡಬದಿಯಲ್ಲಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ಅದೇ ವೇಳೆಗೆ ಹೊನ್ನಾಳಿ ಕಡೆಯಿಂದ 1 ನೇ ಆರೋಪಿಯು ಕೆಎ-17/ಇವೈ-2153 ಮೋಟಾರ್ ಸೈಕಲ್ ನ ಹಿಂಬದಿಯಲ್ಲಿ ಚಾಸಾ-11 ರವರನ್ನು ಕೂರಿಸಿಕೊಂಡು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೃತ ನಾಗರಾಜರವರ ಬೈಕ್ ಗೆ ಡಿಕ್ಕಿ ಪಡಿಸಿದ ಪರಿಣಾಮ ನಾಗರಾಜ್ ರವರು ಬೈಕ್ ನ ಸಮೇತ ಕೆಳಗ್ಗೆ ಬಿದಿದ್ದು ನಾನು ಮತ್ತು ಚಾಸಾ-13 ರವರು ಹೋಗಿ ಉಪಚರಿಸಿದಾಗ ನಾಗರಾಜನಿಗೆ ತಲೆಗೆ, ಎಡಗಣ್ಣಿಗೆ, ಎದೆಗೆ ಮತ್ತು ಇತರ ಕಡೆ ಪೆಟ್ಟು ಬಿದ್ದು ರಕ್ತ ಗಾಯಗಳಾಗಿದ್ದು ಮತ್ತು 1 ನೇ ಆರೋಪಿಗೂ ಸಹ ಬಲಗಾಲು ಮೊಣಕಾಲು, ಪಾದಕ್ಕೆ ಮತ್ತು ಬಲಕಿವಿಗೆ ಪೆಟ್ಟು ಬಿದ್ದು ಗಾಯಗಳಾಗಿದ್ದು ಮತ್ತು ಚಾಸಾ-11 ರವರಿಗೆ ಎಡಗಣ್ಣಿನ ಹತ್ತಿರ ಊತ, ಎಡತೋಳಿನ ಮೇಲೆ ತರಚಿದ ಗಾಯಗಳಾಗಿದ್ದು ಮತ್ತು ಗಾಯಗೊಂಡವರನ್ನು ಆಟೋದಲ್ಲಿ ಹೊನ್ನಾಳಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು ಮತ್ತು 1 ನೇ ಆರೋಪಿಯು ಬೈಕ್ ಅನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಅಪಘಾತವಾಗಿರುತ್ತದೆ ಎಂದು ಮತ್ತು ಆರೋಪಿಯನ್ನು ಮತ್ತು ಬೈಕ್ ಅನ್ನು ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರಿಗೆ ನಿಪಿ-26 ರಂತೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಆರೋಪಿ ಮತ್ತು ಚಾಸಾ-11ರ ವರು ಹೊನ್ನಾಳಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದು ಹೆಚ್ಚಿನ ಚಿಕಿತ್ಸೆಯನ್ನು ದಾವಣಗೆರೆ ಬಾಪೂಜಿ ಆಸ್ಪತ್ರೆಯಲ್ಲಿ ಪಡೆದಿದ್ದು ಮತ್ತು ಮೃತ ನಾಗರಾಜನು ಹೊನ್ನಾಳಿ ಸರ್ಕಾರಿ ಆಸ್ಪತ್ರೆ ಮತ್ತು ಶಿವಮೊಗ್ಗ ಸಹ್ಯಾದ್ರಿ ನಾರಾಯಣ ಹೃದಯಾಲಯ ಆಸ್ಪತ್ರೆ, ಮಂಗಳೂರಿನ ಯಾನೇಪೋಯಾ ಆಸ್ಪತ್ರೆ, ದಾವಣಗೆರೆ ಎಸ್ ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ದಿಃ 25-09-2019 ರಂದು ರಾತ್ರಿ 08-45 ಗಂಟೆ ಸಮಯದಲ್ಲಿ ಮನೆಯಲ್ಲಿ ಮೃತ ಪಟ್ಟಿರುತ್ತಾರೆ ಎಂದು  ಪೊಲೀಸರಿಗೆ ನಿಪಿ-27 ರಂತೆ ಮರುಹೇಳಿಕೆಯನ್ನು ಕೊಟ್ಟಿರುತ್ತೇನೆ

ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು :- ಆರೋಪಿತರ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.